ಚಾಸಾ-9

# 4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,

# ಮಧುಗಿರಿ

## ಎಸ್.ಸಿ.ಸಂಖ್ಯೆ:5033/2020

ದಿನಾಂಕ:20-06-2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

| | |
|---|---|
| **ಹೆಸರು** | ಗಿರೀಶ್ |
| **ತಂದೆಯ ಹೆಸರು** | ಪ್ರಭಾಕರ್ |
| **ವಯಸ್ಸು** | 40 |
| **ಉದ್ಯೋಗ** | ವ್ಯಾಪಾರ |
| **ವಾಸಸ್ಥಳ** | ಚನ್ನರಾಯಪಟ್ಟಣ |

**ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದ :-**

ಚಾಸಾ-7 ಮತ್ತು ಚಾಸಾ-8 ರವರು ನನಗೆ ಗೊತ್ತು. ನಾನು ಚನ್ನರಾಯಪಟ್ಟಣದಲ್ಲಿ 15 ವರ್ಷಗಳಿಂದ ಕೃತಿಕಾ ಎಂಬ ಹೆಸರಿನ ಲಾಡ್ಜ ಅನ್ನು ನಡೆಸಿಕೊಂಡು ಬರುತ್ತಿದ್ದೇನೆ. ಚಾಸಾ-7 ವಿಜಯ ಕುಮಾರ್ ನಮ್ಮ ಲಾಡ್ಜ ನ ಮ್ಯಾನೇಜರು ಆಗಿದ್ದರು. ಮತ್ತು ಚಾಸಾ-8 ಲೋಕೇಶ್ ರೂಂ ಬಾಯ್ ಆಗಿದ್ದರು. ಆ ಲಾಡ್ಜ ಲೀಲಾಕುಮಾರ್ ಎಂಬುವವರ ಹೆಸರಿನಲ್ಲಿ ಇದೆ. ದಿ:07-01-2019 ರಂದು ನಾನು ಲಾಡ್ಜ ಗೆ ಹೋದಾಗ ನಮ್ಮ ಲಾಡ್ಜ ನ ಮ್ಯಾನೇಜರ್ ಹೇಳಿದ್ದೇನೆಂದರೆ ನಮ್ಮ ಲಾಡ್ಜ ನಲ್ಲಿ ಮೂರು ಜನ ರೂಂ ಮಾಡಿದ್ದರು ಅವರಲ್ಲಿ ಒಬ್ಬಳು ಹುಡುಗಿ ಇಬ್ಬರು ಹುಡುಗರು ಎಂದು ಹೇಳಿದರು. ಅವರು ದಿ:06-01-2019 ರಂದು ಲಾಡ್ಜ ಗೆ ಬಂದಿದ್ದರು ಎಂದು ಹೇಳಿದರು. ನಾನು ದಿ:07-01-2019 ರಂದು ಬೆಳಿಗ್ಗೆ ಲಾಡ್ಜ ಗೆ ಹೋದಾಗ ಆ ಮೂರು ಜನರನ್ನು ಸುಮಾರು ಜನರು ದಿ:07-01-2019 ರ ಬೆಳಿಗ್ಗೆ 3

ಗಂಟೆಗೆ ಲಾಡ್ಜ ನಿಂದ ಕರೆದುಕೊಂಡು ಹೋದರು ಎಂದು ಹೇಳಿದರು. ಆ ರೀತಿ ಕರೆದುಕೊಂಡು ಹೋದ ನಂತರ ಏನು ಆಯಿತು ನನಗೆ ಗೊತ್ತಿಲ್ಲ. ಯಾರು ಕರೆದುಕೊಂಡು ಹೋದರು ಎಂದು ನಮ್ಮ ಮ್ಯಾನೇಜರ್ ಹೇಳಿಲ್ಲ. ಹೇಗೆ ಕರೆದುಕೊಂಡು ಹೋದರು ಎಂದು ಹೇಳಿಲ್ಲ. ಬಳಿಕ ಪೊಲೀಸರು ನಮ್ಮ ಲಾಡ್ಜ ಗೆ ಬಂದು ನನ್ನನ್ನು ವಿಚಾರಿಸಿ ಲಾಡ್ಜ ನ ವಿವರ ತೆಗೆದುಕೊಂಡರು. ನಾನು ಪೊಲೀಸರ ಮುಂದೆ ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ಮಾನ್ಯ ಪಿಪಿ ಯವರು ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿದ್ದರಿಂದ ಅನುಮತಿಸಲಾಯಿತು)

**<u>ಪಾಟೀಸವಾಲು ಮಾನ್ಯ ಸರ್ಕಾರಿ ಅಭಿಯೋಜಕರಿಂದ :-</u>**

ನಮ್ಮ ಲಾಡ್ಜ ಗೆ ದಿಃ07-01-2019 ರ ಮೊದಲು ಮನು, ಪ್ರಿಯಾಂಕ ಮತ್ತು ರಂಗನಾಥ ಎಂಬುವವರು ಬಂದು ರೂಂ ಪಡೆದಿದ್ದರು ಎಂದು ನಮ್ಮ ಮ್ಯಾನೇಜರ್ ನಮ್ಮಲ್ಲಿ ಹೇಳಿದ್ದಾರೆ ಎಂದರೆ ನನಗೆ ಲೆಡ್ಜರ್ ನೋಡಿದಾಗ ಅವರ ಹೆಸರು ಗೊತ್ತಾಯಿತು. ಅದೇ ರೀತಿ ಮ್ಯಾನೇಜರ್ ರವರು ಅವರ ವಿಳಾಸ ಮತ್ತು ಹೆಸರನ್ನು ಪಡೆದು ಪುಸ್ತಕದಲ್ಲಿ ನಮೂದಿಸಿ ರೂಂ ನೀಡಿದ್ದಾಗಿ ನನ್ನಲ್ಲಿ ಹೇಳಿದ್ದರು ಎಂದರೆ ಸರಿ. ಎರಡು ರೂಂ ಗಳಲ್ಲಿ 1 ರಲ್ಲಿ ಒಬ್ಬ ಹುಡುಗ ಮತ್ತು ಹುಡುಗಿ ಇನ್ನೊಂದು ರೂಂ ನಲ್ಲಿ ಇನ್ನೊಬ್ಬ ಹುಡುಗ ಇದ್ದರು ಎಂದು ಹೇಳಿದ್ದರು ಎಂದರೆ ಸರಿ. ದಿಃ06-01-2019 ರಂದು ಬೆಳಿಗ್ಗೆ ರೂಂ ಖಾಲಿ ಮಾಡಿಕೊಂಡು ಹೋಗಿದ್ದು ಮತ್ತೆ ಅದೇ ದಿನ ಸಂಜೆ 06ಃ15 ಕ್ಕೆ ವಾಪಸ್ಸು ಬಂದು ರೂಂ ಪಡೆದರು ಎಂದು ಹೇಳಿದರು ಎಂದರೆ ಸರಿ. ದಿಃ07-01-2019 ರಂದು ಬೆಳಿಗ್ಗೆ 03 ಗಂಟೆ ಸಮಯದಲ್ಲಿ ಬೆಂಗಳೂರಿನಿಂದ ಧರಣಿ ಮತ್ತು ಬಸವರಾಜ್ ಎಂಬುವವರು ಸುಮಾರು 9 ಜನ ಹುಡುಗರೊಂದಿಗೆ ಲಾಡ್ಜ ಗೆ ಬಂದು ಮನು ಮತ್ತು ಪ್ರಿಯಾಂಕ ರವರನ್ನು ಕೆರದುಕೊಂಡು ಹೋದರು ಎಂದರೆ ಕರೆದುಕೊಂಡು ಹೋದವರ ಹೆಸರು ಹೇಳಿಲ್ಲ ಎಂದು ನುಡಿಯುತ್ತಾರೆ. ಅವರು ಕರೆದುಕೊಂಡು ಹೋಗುವಾಗ ಮನುವಿಗೆ ಸಿಕ್ಕಾಪಟ್ಟೆ ಹೊಡೆದು ಕರೆದುಕೊಂಡು

ಹೋದರು ಎಂದು ಮ್ಯಾನೇಜರ್ ಹೇಳಿದರು ಎಂದರೆ ಸರಿಯಲ್ಲ.

ಬಳಿಕ ನನಗೆ ತಿಳಿದು ಬಂದಿದ್ದನ್ನು ಏನೇಂದರೆ ಲಾಡ್ಜಗೆ ಬಂದ ಹುಡುಗಿ ಕಾಮಾಕ್ಷಿ ಪಾಳ್ಯದ ಬಸವರಾಜ್ ಎಂಬುವವರ ಮಗಳು ಮತ್ತು ಮನು ಅವರ ಮನೆಯಲ್ಲಿ ಕೆಲಸಕ್ಕೆ ಇದ್ದ ವಅವನು ಪ್ರಿಯಾಂಕಳನ್ನು ಕರೆದುಕೊಂಡು ಹೋಗಿ 2 ರಿಂದ 2 ವರೆ ತಿಂಗಳು ಅಲ್ಲಿ ಸುತ್ತಾಡಿಸಿಕೊಂಡಿದ್ದ ಈ ಕಾರಣದಿಂದ ಆಕೆಯ ತಂದೆ ಮಾವ ಮತ್ತು ಅವರ ಹುಡುಗರು ಮನುವನ್ನು ನಮ್ಮ ಲಾಡ್ಜ ನಿಂದ ಕರೆದುಕೊಂಡು ಹೋಗಿ 6 ನೇ ಆರೋಪಿ ರವರ ಸಂಬಂದಿ ಯವರಿಗೆ ಸೇರಿದ ತುಮಕೂರಿನ ಕೋಳಿ ಹಳ್ಳಿಯ ಶೆಡ್ ನಲ್ಲಿ ಇರಿಸಿಕೊಂಡು ಅಲ್ಲಿಂದ ದಿ:07-01-2019 ರಂದು ಮಧ್ಯ ರಾತ್ರಿ ಕೊರಟಗೆರೆ ಬಳಿಯ ಜಟ್ಟಿ ಅಗ್ರಹಾರದ ಸಮೀಪ 7, 9, 10, ಬೊಡಿ, ಗುಡ್ಡ, ಮಂಜ, ತಿಮ್ಮರಾಜು ಜಗದೀಶ, ಕೆಂಪಹನುಮಯ್ಯ, ಶ್ರೀನಿವಾಸ, ಶಿವಕುಮಾರ, ಗೋಪಿ ಮತ್ತು ಮಾರೇಗೌಡ ಕೊಲೆ ಮಾಡಿದರು ಎಂಬ ವಿಚಾರ ತಿಳಿಯಿತು ಎಂದರೆ ಪೊಲೀಸರು ಬಂದಾಗ ತಿಳಿಯಿತು ಎಂದು ನುಡಿಯುತ್ತಾರೆ. ಬೆಂಗಳೂರಿನ ಧರಣಿ ಮತ್ತು ಬಸವರಾಜು ಎಂಬುವವರು ಬಂದು ಲಾಡ್ಜ ನಲ್ಲಿ ಇದದ ಮನು ಮತ್ತು ಪ್ರಿಯಾಂಕ ರವರನ್ನು ಕರೆದುಕೊಂಡು ಹೋದರು ಹಾಗೂ ಹಾಗೇ ಹೋಗುವಾಗ ಮನುವಿಗೆ ಸಿಕ್ಕಾಪಟ್ಟೆ ಹೊಡೆದು ಕರೆದುಕೊಂಡು ಹೋದರು ಎಂದು ನನ್ನಲ್ಲಿ ಮ್ಯಾನೇಜರ್ ಹೇಳಿದರು ಎಂದರೆ ಸರಿಯಲ್ಲ. ಸಾಕ್ಷಿ ತನ್ನ ಹೇಳಿಕೆಯ ಈ ಭಾಗವನ್ನು ನಿರಾಕರಿಸಿದ ಕಾರಣ ಅದನ್ನು ನಿಪಿ-64 ಎಂದು ಗುರುತಿಸಲಾಯಿತು.

**<u>ಪಾಟೀಸವಾಲು ಶ್ರೀ. ಟಿ ಎಸ್ ಕೆ ರವರಿಂದ 1 ರಿಂದ 14 ಆರೋಪಿ ಪರವಾಗಿ:-</u>**

ನಾನು ಮಧುಗಿರಿಯ ಡಿ.ವೈ.ಎಸ್.ಪಿ ಯವರ ಕಛೇರಿಗೆ ಯಾವತ್ತೂ ಭೇಟಿ ಕೊಟ್ಟಿಲ್ಲ. ನಾನು ಕೊರಟಗೆರೆ ಠಾಣೆಗೆ ಯಾವತ್ತೂ ಭೇಟಿ ನೀಡಿಲ್ಲ. ಪೊಲೀಸರು ನಮ್ಮ ಚನ್ನರಾಯಪಟ್ಟಣದ ಲಾಡ್ಜ ಗೆ ಯವತ್ತು ಬಂದರು ಎಂದು ಗೊತ್ತಿಲ್ಲ. ನಮ್ಮ ಲಾಡ್ಜಗೆ

ಸಂಬಂದಪಟ್ಟಂತೆ ಕಮರ್ಷಿಯಲ್ ಟ್ಯಾಕ್ಸ ಮತ್ತು ಇತರೆ ಟ್ಯಾಕ್ಸ ನೀಡುವ ಬಗ್ಗೆ ಒಂದು ಲೆಡ್ಜರ್ ಇಟ್ಟುಕೊಂಡಿರುತ್ತೇವೆ ಎಂದರೆ ಸರಿ. ರೂಂಗೆ ಗೆಸ್ಟ ಗಳು ಬಂದಾಗ ಅವರಿಂದ ಪಡೆದ ರೂಂ ಬಾಡಿಗೆ ಇವುಗಳನ್ನು ಆ ಲೆಡ್ಜರ್ ಬುಕ್ ನಲ್ಲಿ ನಮೂದಯಿ ಮಾಡಿ ಆ ಮಾಹಿತಿಯನ್ನು ಕಮರ್ಷಿಯಲ್ ಟ್ಯಾಕ್ಸ ಮತ್ತು ಇನ್ ಕಮ್ ಟ್ಯಾಕ್ಸ ಗೆ ಒದಗಿಸುತ್ತೇವೆ ಎಂದರೆ ಸರಿ. ಆಡಿಟ್ ಮಾಡುವಾಗ ಆ ನಮೂದುಗಳನ್ನು ಪರಿಶೀಲಿಸಿ ಇನ್ ಕಮ್ ಟ್ಯಾಕ್ಸ ಅಥವಾ ಕಮರ್ಷಿಯಲ್ ಟ್ಯಾಕ್ಸ ರವರಿಂದ ಲೆಡ್ಜರ್ ಗೆ ಸಹಿಯನ್ನು ತೆಗೆದುಕೊಂಡು ಅವರ ಮುದ್ರೆ ಒತ್ತಿಸಿಕೊಳ್ಳುವ ಕ್ರಮ ಇದೆ ಎಂದರೆ ಸರಿ. ಆ ರೀತಿ ಸಹಿ ಮಾಡಿಸಿಕೊಂಡಂತೆ ಲೆಡ್ಜರ್ ಅನ್ನು ನಾನು ಈ ಕೇಸಿನ ತನಿಖಾ ಪೊಲೀಸರ ಮುಂದೆ ಹಾಜರುಪಡಿಸಿಲ್ಲ. ಮ್ಯಾನೇಜರ್ ರವರು ಪೊಲೀಸರ ಮುಂದೆ ಯಾವ ಲೆಡ್ಜರ್ ಹಾಜರುಪಡಿಸಿದರು ಎಂದು ನನಗೆ ಗೊತ್ತಿಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಚಿಳಿದ ವಿಚಾರಗಳನ್ನು ಪೊಲೀಸರ ಮುಂದೆ ಹೇಳಲೇ ಇಲ್ಲ ಮತ್ತು ನನಗೆ ಆ ವಿಚಾರ ಯಾವುದೂ ಗೊತ್ತಿಲ್ಲ ಎಂದರೆ ಸರಿಯಲ್ಲ . ಮ್ಯಾನೇಜರ್ ನನ್ನಲ್ಲಿ ಯಾವುದೇ ವಿಚಾರ ಹೇಳಿಲ್ಲ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.
(ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಒ ತಿ ಹೇ ಸ ಇದೆ.**

**4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಮಧುಗಿರಿ.**